ದಿನಾಂಕ: 21.05.2022 ರಂದು ಬೆಳಗ್ಗೆ 11.30 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 100 ರಲ್ಲಿ ಶ್ರೀ ಧ್ರುವರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಧ್ರುವರಾಜ್, ನೋಡಲ್ ಅಧಿಕಾರಿಗಳು
2. ಶ್ರೀ ಪವನ್.ಆರ್.ಜಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀ ರಮೇಶ್.ಎಸ್.ಟಿ. ಪಶು ಸಂಘೋಪನಾ ಇಲಾಖೆ
4. ಶ್ರೀ ಮಂಜುನಾಥ್, ತೋಟಗಾರಿಕೆ ಇಲಾಖೆ, ಬಿ.ಬಿ.ಎಂ.ಪಿ.
5. ಶ್ರೀ ಹರೀಶ್, ಮಾರ್ಷಲ್
6. ಶ್ರೀ ಎನ್. ಮಲ್ಲೇಶ್. ಆರ್.ಐ.
7. ಶ್ರೀಮತಿ ಚಂದ್ರಕಲಾ, ಕ್ರಾಫ್ಟ್ ಉಪಾಧ್ಯಾಯರು
8. ಶ್ರೀ ಮಂಜುನಾಥ್.ಎ.ಕೆ. ಬಸವೇಶ್ವರನಗರ ಪೋಲಿಸ್ ಠಾಣೆ
9. ಶ್ರೀ ಶ್ರೀಶೈಲ ಪಾಟೀಲ್, ವಿಜಯನಗರ ಪೋಲಿಸ್ ಠಾಣೆ
10. ಶ್ರೀ ವಿನಯಕುಮಾರ್, ಬೀದಿ ದೀಪ
11. ಶ್ರೀ ಸಾಗರ್, ಸದಸ್ಯರು
12. ಶ್ರೀ ಪ್ರಕಾಶ್.ಜಿ.
13. ಶ್ರೀ. ಶ್ರೀನಿವಾಸ್, ಬಿ.ಡ್ಬ್ಲ್ಯೂ.ಎಸ್.ಎಸ್.ಬಿ.
14. ಶ್ರೀ ರಘು, ಘನತ್ಯಾಜ್ಯ ನಿರ್ವಾಹಕರು
15. ಶ್ರೀಮತಿ ಸಂಧಾ ಹಿರಿಯ ಆರೋಗ್ಯ ಪರಿವೀಕ್ಷಕರು
16. ಶ್ರೀ ಸೆಲ್ವಕುಮಾರ್.
17. ಶ್ರೀಮತಿ ಶೈಲ.ಎನ್.

ದಿನಾಂಕ: 21.05.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 100 ಬಸವೇಶ್ವರನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಬರುವ 11ನೇ ಅಡ್ಡ ರಸ್ತೆಯಲ್ಲಿ ಹಾಗೂ ಯು.ಜಿ.ಡಿ. ಮ್ಯಾನ್ ಹೋಲ್ ಸುತ್ತ ಮುತ್ತಲು ರಸ್ತೆ ಸಿಂಕ್ ಆಗುತ್ತಿರುವ ಬಗ್ಗೆ ಬಿ.ಡ್ಬ್ಲ್ಯೂ.ಎಸ್.ಎಸ್.ಬಿ. ರವರಿಗೆ ರಸ್ತೆ ಅಗೆತ ಮಾಡುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
2. ವಾರ್ಡ್ ಸದಸ್ಯರು ವಿಶ್ವೇಶ್ವರಯ್ಯ ಪಾರ್ಕ್ ಸ್ವಚ್ಛತೆಯ ಬಗ್ಗೆ ಹಾಗೂ ಗೇಟ್ ದುರಸ್ಥಿಯ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲು ಅಧಿಕಾರಿ ತೋಟಗಾರಿಕೆ ಅಧಿಕಾರಿ ರವರಿಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದರು.
3. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಮಠದ ಸಿಗ್ನಲ್‌ನ ಕಂಬದ ಜಾಗ ಬದಲಾವಣೆ ಮಾಡಲು ಸಂಚಾರಿ ಪೋಲಿಸ್ ಅಧಿಕಾರಿಗಳ ಜೊತೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು
4. ವಾರ್ಡ್ ಸದಸ್ಯರು ವಾರ್ಡ್ ರಸ್ತೆಯ ಕಾಮಗಾರಿಯ ಶೋಲ್ಡರ್ ಡ್ರೈನ್ ಮಾಡಲು ವಾರ್ಡಿನ ಅಕ್ಕ ಪಕ್ಕದ ನಿವಾಸಿಗಳು ತೊಂದರೆ ಉಂಟು ಮಾಡುತ್ತಿರುವುದಾಗಿ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸಹಾಯಕ ಅಭಿಯಂತರರಿಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ನೇತಾಜಿ ಆಟದ ಮೈಧಾನದ ಹತ್ತಿರ ಪಿ.ಹೆಚ್.ಸಿ. ಸೈಟ್ ಇರುವುದರ ಬಗ್ಗೆ ಕಂದಾಯ ನಿರೀಕ್ಷಕರ ಜೊತೆ ಚರ್ಚಿಸಿದರು.

6. ನೋಡಲ್ ಅಧಿಕಾರಿಗಳು ರಾಜ ಕಾಲುವೆ ಹತ್ತಿರ ಸಾರ್ವಜನಿಕರು ಕಸ ಹಾಕುತ್ತಿರುವ ಬಗ್ಗೆ ಚರ್ಚಿಸಿದರು. ಹಾಗೂ ಬೀದಿ ದೀಪ ಮತ್ತು ಮೆಸ್ ಹಾಕಲು ವಾರ್ಡಿನ ಸಹಾಯಕ ಅಬಿಯಂತರರಿ ಸೂಚಿಸಿದರು.

7. ವಾರ್ಡ್ ಸದಸ್ಯರು ಪ್ರಿಯದರ್ಶಿನಿ ಹೋಟೆಲ್ ಮುಂದೆ ಒಣಗಿರುವ ರಂಬೆ ತೆರವುಗೊಳಿಸುವ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಅರಣ್ಯ ಇಲಾಖೆಯವರಿಗೆ ತೆರವುಗೊಳಿಸುವಂತೆ ಹಾಗೂ ತೊಂದರೆ ಇರುವ ಕಡೆ ಸೂಚನಾ ಫಲಕ ಅಳವಡಿಸುವಂತೆ ಸೂಚಿಸಿದರು.

8. ವಾರ್ಡ್ ಸದಸ್ಯರು, ಪವಿತ್ರ ಪ್ಯಾರಡೈಸ್ ಹತ್ತಿರವಿರುವ 2ನೇ ಅಡ್ಡ ರಸ್ತೆಯಲ್ಲಿ ನೋ ಎಂಟ್ರಿ ನಾಮ ಫಲಕ ಅಳವಡಿಸುವಂತೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸಂಚಾರಿ ಪೋಲಿಸ್ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

9. ವಾರ್ಡ್ ಸದಸ್ಯರು, ವಾರ್ಡ್ ವ್ಯಾಪ್ತಿಯಲ್ಲಿ ಹಳೇಯ ಅನಧಿಕೃತ ವಾಹನ ನಿಲುಗಡೆ ಮಾಡಿರುವುದು ಮತ್ತು ಅದರಿಂದ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಸಂಚಾರಿ ಪೋಲಿಸ್ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

10. ಶ್ರೀಮತಿ ಸಂಧಾ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾತನಾಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಡ್ಯೆಂಗ್ಯೂ ಮತ್ತು ಮಲೇರಿಯಾ ಕಾಯಿಲೆ ಹೆಚ್ಚಾಗುತ್ತಿದ್ದು, ವಾರ್ಡ್ ವ್ಯಾಪ್ತಿಯ ಸುತ್ತ ಮುತ್ತ ನೀರು ನಿಲುಗಡೆ ತಡೆಗಟ್ಟಲು ಎಚ್ಚರ ವಹಿಸುವಂತೆ ಹಾಗೂ ಔಷಧಿ ಸಿಂಪಡಣೆ ಮಾಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 100